ಅಧ್ಯಾಯ–೯
ಶಿಕ್ಷಣ ಮತ್ತು ಕ್ರೀಡೆ

ಮಕ್ಕಳಿಗೆ ಬಾಲ್ಯದಿಂದಲೇ ಅವರ ದೈಹಿಕ ಹಾಗೂ ಮಾನಸಿಕ ಬೆಳವಣಿಗೆಗೆ ಪೂರಕವಾದ ತರಬೇತಿಯನ್ನು ಕೊಡುವ ಶಿಕ್ಷಣ ಪದ್ಧತಿ ಭಾರತದಲ್ಲಿ ತುಂಬ ಪ್ರಾಚೀನ ಕಾಲದಿಂದಲೇ ಬೆಳೆದು ಬಂದಿದೆ. ಈ ನಿಟ್ಟಿನಲ್ಲಿ 'ಗುರುಕುಲ' ಪದ್ಧತಿ ಒಂದೆಡೆಯಾದರೆ, ಮತ್ತೊಂದೆಡೆ ಅನೌಪಚಾರಿಕ ಶಿಕ್ಷಣ, ತಂದೆಯಿಂದ ಮಕ್ಕಳಿಗೆ ಮೌಖಿಕ ವಿಧಾನದಲ್ಲಿ ವಂಶಪಾರಂಪರ್ಯವಾಗಿ ವರ್ಗಾವಣೆಯಾಗುತ್ತಿತ್ತು.

ತಮ್ಮ ಆಡಳಿತದ ಅನುಕೂಲತೆಯ ದೃಷ್ಟಿಯಿಂದ ಭಾರತೀಯರಿಗೆ ತಮ್ಮ ಮಾದರಿಯ ಶಿಕ್ಷಣ ಕಲಿಸಲು ಬ್ರಿಟಿಷರು ಆಲೋಚಿಸಿದ್ದು ಭಾರತೀಯ ಶಿಕ್ಷಣಕ್ಷೇತ್ರದಲ್ಲಿ ಮಹತ್ವಪೂರ್ಣ ಅಧ್ಯಾಯವನ್ನು ತೆರೆಯಿತು. ಮೆಕಾಲೆ 'ಭಾರತದಲ್ಲಿ ಬ್ರಿಟಿಷ್ ಸಾಮ್ರಾಜ್ಯ ನಾಶವಾಗಬಹುದು ಆದರೆ ಇಂಗ್ಲಿಷ್ ಮಾತ್ರ ಶಾಶ್ವತ' ಎಂದು ಆಲೋಚಿಸಿದ್ದು ಸತ್ಯವಾಯಿತು. ೨–೨–೧೮೩೫ರಲ್ಲಿ ಮೆಕಾಲೆಯ ಶೈಕ್ಷಣಿಕ ವರದಿ ಭಾರತದಲ್ಲಿ ಆಧುನಿಕ ಶಿಕ್ಷಣದ ಆರಂಭಕ್ಕೆ ನಾಂದಿ ಹಾಡಿತು.

ಸಾಕ್ಷರತೆ : ೨೦೦೧ರ ಜನಗಣತಿ ಪ್ರಕಾರ ತಾಲೂಕಿನಲ್ಲಿ ಒಟ್ಟು ೧೫೬೧೨೮ ಜನ ಅಕ್ಷರಸ್ಥರಿದ್ದು ಸಾಕ್ಷರತೆ ಪ್ರಮಾಣ ೫೭.೨೪ ಇರುತ್ತದೆ. ಹೀಗಾಗಿ ನಂಜನಗೂಡು, ಜಿಲ್ಲೆಯಲ್ಲೇ ಅತ್ಯಂತ ಕಡಿಮೆ ಸಾಕ್ಷರತೆ ಪ್ರಮಾಣ ಹೊಂದಿದ ತಾಲೂಕಾಗಿದೆ. ತಾಲೂಕಿನ ಅಕ್ಷರಸ್ಥರಲ್ಲಿ ೯೧,೪೧೧ ಜನ ಪುರುಷರು (ಸಾ.ಪ್ರ: ೫೭.೨೪) ಹಾಗೂ ೬೪,೭೧೭ ಜನ ಮಹಿಳೆಯರು (ಸಾ.ಪ್ರ: ೪೧.೭೦). ಗ್ರಾಮೀಣ ಪ್ರದೇಶದಲ್ಲಿ ೧,೨೩,೫೭೬ ಜನ (೪೫.೩೮) (ಪು:೭೩,೫೯೭, ಮ:೪೯,೯೭೯) ಹಾಗೂ ಪಟ್ಟಣ ಪ್ರದೇಶದಲ್ಲಿ ೩೨,೫೫೨ (೭೬.೩೭) (ಪು:೧೭,೮೧೪ ಮ:೧೪,೭೩೮) ಜನ ಅಕ್ಷರಸ್ಥರಿದ್ದರು.

ಜಾಗತೀಕರಣದ ಈ ಸಂದರ್ಭದಲ್ಲಂತೂ ಸಾಕ್ಷರತೆಯ ಮಹತ್ವ ಮತ್ತಷ್ಟು ಅಧಿಕವಾಗಿದೆ. ಈ ಹಿನ್ನೆಲೆಯಲ್ಲೆ ಕರ್ನಾಟಕ ರಾಜ್ಯ ಸಾಕ್ಷರತಾ ಮಿಷನ್ ಪ್ರಾಧಿಕಾರವು 'ಸಣ್ಣ ಯೋಜನೆ ಮಾರ್ಗ'ಕ್ಕೆ ವಿಶೇಷ ಆದ್ಯತೆ ನೀಡುತ್ತಿದೆ. ಈ ಎಲ್ಲಾ ವಿವರಗಳನ್ನು ಇಲ್ಲಿ ಅವಲೋಕಿಸುವುದು ಮುಖ್ಯ ಉದ್ದೇಶ, ನಂಜನಗೂಡು ತಾಲೂಕು ಸಾಕ್ಷರತೆಯಲ್ಲಿ

ಅತೀ ಹಿಂದುಳಿದಿರುವ ತಾಲೂಕಾಗಿದೆ. ತಾಲೂಕಿಗೆ ಅಂಟಿದ ಈ ಕಪ್ಪುಚುಕ್ಕೆಯನ್ನು ನಿವಾರಿಸಲು ಹಲವು ರೀತಿಯ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಈ ನಿಟ್ಟಿನಲ್ಲಿ ನಡೆದ ಒಂದು ಕಾರ್ಯಕ್ರಮ 'ಕಿರು ಸಾಕ್ಷರತಾ ಯೋಜನೆ'. ದೊಡ್ಡಕವಲಂದೆ, ನೇರಳೆ, ಬದನವಾಳು, ಹೆಮ್ಮರಗಾಲ, ದೇವನೂರು–ಈ ಐದು ಗ್ರಾಮ ಪಂಚಾಯತಿಗಳಿಗೆ ಸೇರಿದ ೨೫೪ ಗ್ರಾಮಗಳ ೫,೭೨೧ ಜನ ಅನಕ್ಷರಸ್ಥರನ್ನು ಗುರುತಿಸಿ ಮೊದಲ ಹಂತದಲ್ಲಿ ೨,೨೪೩ ಜನರನ್ನು ಆಯ್ಕೆ ಮಾಡಿಕೊಳ್ಳಲಾಯಿತು. ಇವರಲ್ಲಿ ೨೦೦೧ ಜನ ಓದು, ಬರಹ, ಲೆಕ್ಕಗಳನ್ನು ಕಲಿತು ಮಾಡಿದ ಸಾಧನೆಗೆ ೨೦೦೪–೦೫ನೇ ಸಾಲಿನ ರಾಜ್ಯ ಪ್ರಶಸ್ತಿಯನ್ನೂ ನೀಡಲಾಗಿದೆ. ಈ ಕ್ರಿಯೆ ನಿರಂತರವಾಗಿ ಸಾಗಿದೆ.

ಅಂಗನವಾಡಿ ಕೇಂದ್ರಗಳು : ಪ್ರಾಥಮಿಕ ಪೂರ್ವ ಶಿಕ್ಷಣ ಒದಗಿಸುವ ಶಿಶುವಿಹಾರ, ಬಾಲವಾಡಿಗಳು ಎಳೆ ವಯಸ್ಸಿನ ಮಕ್ಕಳನ್ನು ಪ್ರಾಥಮಿಕ ಶಿಕ್ಷಣಕ್ಕೆ ಮಾನಸಿಕವಾಗಿ ಸಜ್ಜುಗೊಳಿಸುವ ಹಂತವಾಗಿದ್ದು, ಮಕ್ಕಳನ್ನು ದೈಹಿಕವಾಗಿ ಹಾಗೂ ಮಾನಸಿಕವಾಗಿ ಕ್ರಿಯಾಶೀಲವಾಗಿ ಬೆಳೆಸುವಲ್ಲಿ ನೆರವಾಗುತ್ತದೆ. ೨೦೦೯ರ ಮಾರ್ಚ್ ಅಂತ್ಯಕ್ಕೆ ತಾಲೂಕಿನಲ್ಲಿ ೫೫೦ ಅಂಗನವಾಡಿ ಕೇಂದ್ರಗಳಿದ್ದು, ಜಿಲ್ಲೆಯಲ್ಲಿ ಹೆಚ್ಚು ಅಂಗನವಾಡಿ ಕೇಂದ್ರಗಳನ್ನು ಹೊಂದಿರುವ ತಾಲೂಕೆಂಬ ಹೆಗ್ಗಳಿಕೆ ನಂಜನಗೂಡಿಗೆ ಸಲ್ಲುತ್ತದೆ.

ಪ್ರಾಥಮಿಕ ಶಿಕ್ಷಣ : ಪ್ರಾಥಮಿಕ ಶಿಕ್ಷಣಕ್ಕೆ ಸರ್ಕಾರದ ಶಿಕ್ಷಣ ನೀತಿಯು ಆದ್ಯಗಮನ ನೀಡುತ್ತಿದೆ. ಅನೇಕ ಕಾರಣಗಳಿಂದ ಗ್ರಾಮೀಣ ಪರಿಸರದ ಮಕ್ಕಳು ಶಿಕ್ಷಣ ವಂಚಿತರಾಗುತ್ತಿದ್ದಾರೆ. ಈ ರೀತಿಯ ಸಮಸ್ಯೆಗಳನ್ನು ಗಮನಿಸಿ ಅವುಗಳಿಗೆ ಪರಿಹಾರ ಕ್ರಮ ಕೈಗೊಳ್ಳುವುದರ ಜೊತೆಗೆ ಅನೇಕ ನೂತನ ಯೋಜನೆಗಳನ್ನು ಸರ್ಕಾರ ಹಮ್ಮಿಕೊಳ್ಳುತ್ತಿದೆ. ಶಾಲಾಕೊಠಡಿಗಳ ನಿರ್ಮಾಣ, ಆಟದ ಮೈದಾನ, ಗ್ರಂಥಾಲಯ ವ್ಯವಸ್ಥೆ, ಪಾಠೋಪಕರಣ, ಪೀಠೋಪಕರಣ, ಸಂಚಾರಿ ಶಾಲೆ, ಟೆಂಟ್ ಶಾಲೆ ಬಿಸಿಯೂಟದ ವ್ಯವಸ್ಥೆ, ದಾಖಲಾತಿ ಆಂದೋಲನ, ಬಾ ಮರಳಿ ಶಾಲೆಗೆ, ಕೂಲಿಯಿಂದ ಶಾಲೆಗೆ, ಚಿಣ್ಣರ ಅಂಗಳ–ಇಂಥ ಯೋಜನೆಗಳು ಕೂಲಿ ಮಾಡುತ್ತಿದ್ದ ಮಕ್ಕಳನ್ನು ಶಾಲೆಯ ಅಂಗಳಕ್ಕೆ ಸೆಳೆಯಲು ಸರ್ವ ಪ್ರಯತ್ನಗಳನ್ನೂ ಮಾಡುತ್ತಿವೆ. ಹೆಣ್ಣುಮಕ್ಕಳಿಗಾಗಿ ಈ ಎಲ್ಲಾ ಯೋಜನೆಗಳ ಜೊತೆಗೆ 'ಬಾ ಬಾಲೆ ಶಾಲೆಗೆ' ಎಂಬ ವಿಶೇಷ ಯೋಜನೆಯನ್ನೂ ಅನುಷ್ಠಾನಕ್ಕೆ ತರಲಾಗಿದೆ. ಒಟ್ಟಾರೆಯಾಗಿ ಶಾಲೆಯಿಂದ ಹೊರಗಿರುವ ಆರರಿಂದ ೧೪ರ ವಯೋಮಾನದ ಎಲ್ಲಾ ಮಕ್ಕಳನ್ನೂ ಮುಖ್ಯವಾಹಿನಿಗೆ ಕರೆತರಲು ತಾಲೂಕು ಶಿಕ್ಷಣಾಧಿಕಾರಿಗಳು, ಮುಖ್ಯ ಶಿಕ್ಷಕರು, ಶಿಕ್ಷಕರು, ಸರ್ವಶಿಕ್ಷಣ ಅಭಿಯಾನ ಸಮಿತಿ, ಸಮಾಜ ಸೇವಾಸಂಸ್ಥೆಗಳು ಪ್ರಯತ್ನ ಮಾಡುತ್ತಿವೆ. ಕರ್ನಾಟಕ ಸರ್ಕಾರದ 'ಅಕ್ಷರ ದಾಸೋಹ' ಮಕ್ಕಳಿಗೆ ಬಿಸಿಯೂಟದ ಸೌಲಭ್ಯವು ಬಾಲಕಾರ್ಮಿಕರನ್ನು ಶಾಲೆಯತ್ತ ಸೆಳೆಯುವಲ್ಲಿ ಯಶಸ್ವಿಯಾಗಿದೆ. ಇದರಿಂದ ಅಪೌಷ್ಟಿಕತೆಯಿಂದ ಬಳಲುತ್ತಿದ್ದ ಮಕ್ಕಳಿಗೂ ಅನುಕೂಲವಾಗಿದೆ.

೨೦೦೩–೨೦೧೦ರವರೆಗೆ 'ಸರ್ವ ಶಿಕ್ಷಣ ಅಭಿಯಾನ' ಎಂಬ ವಿಶಿಷ್ಟ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದ್ದು ನಂಜನಗೂಡು ತಾಲೂಕಿನಲ್ಲಿ ನಂಜನಗೂಡು ಪಟ್ಟಣ, ಕಳಲೆ, ಹುಲ್ಲಹಳ್ಳಿ, ಕಪ್ಪುಸೋಗೆ, ಹುರ, ಹೆಡಿಯಾಲ, ತಾಂಡವಪುರ, ಹೊಸಕೋಟೆ, ಸುತ್ತೂರು, ತಗಡೂರು, ಬದನವಾಳು, ಹೆಮ್ಮರಗಾಲ, ದಾಸನೂರು, ಕೂಡ್ಲಾಪುರ–ಈ ೧೪ ಕ್ಲಸ್ಟರ್‌ಗಳನ್ನು ಮಾಡಿಕೊಂಡು ಆಯಾ ಕ್ಲಸ್ಟರ್‌ಗೆ ಸೇರಿದ ಶಾಲೆಗಳ ಬಗೆಗೆ ತೀವ್ರ ಗಮನ ವಹಿಸಲಾಗುತ್ತಿದೆ. ಇದರ ಪ್ರಕಾರ ಪ್ರತಿ ಒಂದು ಹಿರಿಯ ಪ್ರಾಥಮಿಕ ಶಾಲೆಗೆ ರೂ. ೫೦,೦೦೦ ಅನುದಾನ ನೀಡಲಾಗುತ್ತದೆ. ಈ ಹಣವನ್ನು ಶಾಲಾ ನಿರ್ವಹಣಾ ವೆಚ್ಚ, ಕೊಠಡಿಗಳ ನಿರ್ಮಾಣ, ಕುಡಿಯುವ ನೀರಿನ ಸೌಲಭ್ಯ, ವಿದ್ಯುತ್, ಕಟ್ಟಡ ರಿಪೇರಿ, ಶೌಚಾಲಯ, ಅಂಗವಿಕಲ ಮಕ್ಕಳಿಗೆ ಇಳಿಜಾರು ವೇದಿಕೆ, ಸೇವಾದಳ, ಶೈಕ್ಷಣಿಕ ಉಪಕರಣಗಳ ಖರೀದಿ ಮುಂತಾದ ಶಾಲಾ ಅಗತ್ಯ ವೆಚ್ಚಗಳಿಗೆ ಬಳಸುವ ಜತೆಗೆ ಪ್ರತಿ ಶಿಕ್ಷಕರಿಗೆ ರೂ. ೫೦೦ ಅನುದಾನ ನೀಡಲಾಗುತ್ತದೆ. ಶಾಲೆಗೆ ಬೇಕಾಗುವ ಆರ್ಥಿಕ, ಬೌದ್ಧಿಕ, ಭೌತಿಕ ಸಲಕರಣೆಗಳಿಗೆ ಇದನ್ನು ಉಪಯೋಗಿಸಬಹುದಾಗಿದೆ.

ಆರರಿಂದ ೧೪ ವಯೋಮಾನದ ಮಕ್ಕಳು ಯಾವುದೇ ಕಾರಣಕ್ಕೆ ಶಾಲೆಯಿಂದ ಹೊರಗೆ ಉಳಿಯದಂತೆ ಎಚ್ಚರಿಕೆ ವಹಿಸುವುದರ ಜೊತೆಗೆ ಶಾಲೆಗೆ ಬರಲು ಸಾಧ್ಯವೇ ಇಲ್ಲದಂಥ ಮಕ್ಕಳಿಗೆ ಗೃಹಾಧಾರಿತ ಶಿಕ್ಷಣ ನೀಡುವುದರ ಬಗೆಗೂ ಪ್ರಯತ್ನಗಳು ಸಾಗುತ್ತಿವೆ. ಶಾಲೆಗೆ ಬರುವ ಮಕ್ಕಳು ಸ್ವಕಲಿಕೆ, ಸ್ವವೇಗದ ಕಲಿಕೆ, ಸಂತಸದ ಕಲಿಕೆ ಸಾಮರ್ಥ್ಯಾಧಾರಿತ ಚಟುವಟಿಕೆ, ಗುಂಪು ಚಟುವಟಿಕೆ ಮೂಲಕ ಬೋಧನೆ, ಚಿಣ್ಣರ ಕರ್ನಾಟಕ ದರ್ಶನ (ಪ್ರತಿವರ್ಷವೂ ತಾಲೂಕಿನ ಆಯ್ದ ೫೦ ಮಕ್ಕಳಿಗೆ ನಾಲ್ಕುದಿನಗಳ ಕರ್ನಾಟಕ ಪ್ರವಾಸ), ಕ್ಲಸ್ಟರ್, ತಾಲೂಕು, ಜಿಲ್ಲಾ ಮಟ್ಟದಲ್ಲಿ ಪ್ರತಿಭಾಕಾರಂಜಿ ಪ್ರದರ್ಶನ–ಇಂಥ ಕಾರ್ಯಕ್ರಮಗಳು ಮಕ್ಕಳ ಪ್ರತಿಭಾಭಿವ್ಯಕ್ತಿಗೆ ಸಾಣೆ ಹಿಡಿಯುತ್ತಿವೆ.

೨೦೦೯ರ ಮಾರ್ಚ್ ಅಂತ್ಯಕ್ಕೆ ತಾಲೂಕಿನಲ್ಲಿದ್ದ ಪ್ರಾಥಮಿಕ ಶಾಲೆಗಳ ವಿವರ – ಒಟ್ಟು ಪ್ರಾಥಮಿಕ ಶಾಲೆಗಳು: ೨೯೯, ಹಿರಿಯ ಪ್ರಾಥಮಿಕ ಶಾಲೆಗಳು: ೧೩೯, ಕಿರಿಯ ಪ್ರಾಥಮಿಕ ಶಾಲೆಗಳು: ೧೬೦. ೧೩೯ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಐದು ಉರ್ದುಶಾಲೆ, ಐದು ಬಾಲಕಿಯರ ಹಿರಿಯ ಪ್ರಾಥಮಿಕ ಶಾಲೆ ಹಾಗೂ ೨೭ ಖಾಸಗಿ ಶಾಲೆಗಳೂ ಇವೆ. ಖಾಸಗಿ ಶಾಲೆಗಳು ಪಟ್ಟಣದಲ್ಲಿ ಎಂಟು ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ೧೯ ಇವೆ. ಪಟ್ಟಣದ ಆರು ಖಾಸಗಿ ಶಾಲೆಗಳು ಕನ್ನಡ ಮಾಧ್ಯಮ ಹಾಗೂ ಎರಡು ಖಾಸಗಿ ಶಾಲೆಗಳು ಇಂಗ್ಲಿಷ್ ಮಾಧ್ಯಮವನ್ನೂ ಅನುಸರಿಸುತ್ತಿವೆ. ಗ್ರಾಮೀಣ ಪ್ರದೇಶದ ಎಲ್ಲಾ ೧೯ ಶಾಲೆಗಳೂ ಅನುದಾನರಹಿತವಾಗಿದ್ದು ಇವು ಕನ್ನಡ ಮಾಧ್ಯಮ ಶಾಲೆಗಳೆಂದು ನೋಂದಣಿ ಪಡೆದಿವೆ. ಉಳಿದ ಶಾಲೆಗಳು ಸರ್ಕಾರದ ವತಿಯಿಂದ ನಡೆಯುತ್ತಿದ್ದು ಎಲ್ಲ ಶಾಲೆಗಳೂ ಕನ್ನಡ ಮಾಧ್ಯಮವನ್ನೇ ಅನುಸರಿಸುತ್ತಿವೆ. ೧೬೦ ಕಿರಿಯ ಪ್ರಾಥಮಿಕ ಶಾಲೆಗಳಲ್ಲಿ ಆರು ಉರ್ದುಶಾಲೆ ಮತ್ತು ಒಂದು ಬಾಲಕಿಯರ ಶಾಲೆಗಳಾಗಿವೆ.

ಒಂದರಿಂದ ಏಳನೇ ತರಗತಿವರೆಗೆ ಒಟ್ಟು ದಾಖಲಾತಿ ವಿವರ: ೩೦–೦೬–೦೫ರಲ್ಲಿದ್ದಂತೆ

ವಿವರ		೨೦೦೪–೦೫	೨೦೦೫–೦೬
ಒಟ್ಟು ಮಕ್ಕಳು		೪೧೭೯೧	೪೦೪೧೫
ಗಂಡುಮಕ್ಕಳು		೨೦೭೩೦	೨೦೧೦೯
ಹೆಣ್ಣುಮಕ್ಕಳು		೨೧೦೬೧	೨೦೩೦೬
ಪರಿಶಿಷ್ಟ ಜಾತಿ:	ಗಂ:	೫೩೦೬	೫೧೭೪
	ಹೆ:	೫೫೩೦	೫೨೫೩
ಪರಿಶಿಷ್ಟ ಪಂಗಡ:	ಗಂ:	೩೧೪೧	೩೧೨೯
	ಹೆ:	೩೨೦೭	೩೧೪೨
ಇತರೆ	ಗಂ:	೧೨೨೪೩	೧೧೪೦೫
	ಹೆ:	೧೨೩೨೪	೧೧೪೭೧

ಇದರಲ್ಲಿ ಹೆಣ್ಣುಮಕ್ಕಳ ಶಾಲಾ ದಾಖಲಾತಿ ಪ್ರಮಾಣವೇ ಹೆಚ್ಚಿರುವುದು ಗಮನಾರ್ಹ. ಅದೇ ೨೦೦೯ರ ಮಾರ್ಚ್ ಅಂತ್ಯಕ್ಕೆ ತಾಲೂಕಿನಲ್ಲಿದ್ದ ೩೧೬ ಪ್ರಾಥಮಿಕ (ಕಿರಿಯ ಮತ್ತು ಹಿರಿಯ) ಶಾಲೆಗಳಲ್ಲಿ ೪೪,೩೧೦ (೨೩೧೯೪ ಬಾಲಕರು ಹಾಗೂ ೨೧,೧೧೬ ಬಾಲಕಿಯರು) ಮಂದಿ ವ್ಯಾಸಂಗಾರ್ಥಿಗಳಿದ್ದರು.

ಪ್ರೌಢ ಶಿಕ್ಷಣ : ಪ್ರಾಥಮಿಕ ಶಿಕ್ಷಣದ ಮುಂದಿನ ಹಂತವಾದ ಪ್ರೌಢಶಿಕ್ಷಣಕ್ಕೆ ತಾಲೂಕಿನಲ್ಲಿ ೫೦ರ ದಶಕದಲ್ಲಿ ಇದ್ದ ಅವಕಾಶ ತೀರಾ ಕಡಿಮೆ. ನಂಜನಗೂಡಿನಲ್ಲಿದ್ದ ಪ್ರೌಢಶಾಲೆಯೊಂದೇ ತಾಲೂಕಿನ ಎಲ್ಲ ಗ್ರಾಮಗಳಿಗೂ ಆಸರೆಯಾಗಿದ್ದು, ನಂತರ ಸುತ್ತೂರು ಹಾಗೂ ಹುಲ್ಲಹಳ್ಳಿಗಳಲ್ಲಿ ಪ್ರಾರಂಭವಾದ ಜೆ.ಎಸ್.ಎಸ್. ಪ್ರೌಢಶಾಲೆಗಳು ಗ್ರಾಮೀಣ ವಿದ್ಯಾರ್ಥಿಗಳಿಗೆ ವರದಾನವಾದುವು. ೨೦೦೬ರ ಮಾರ್ಚ್ ಅಂತ್ಯಕ್ಕೆ ಪ್ರಸ್ತುತ ತಾಲೂಕಿನಲ್ಲಿ ೪೭ ಪ್ರೌಢಶಾಲೆಗಳಿದ್ದು ೫೯೯೦ ಹುಡುಗರು ಹಾಗೂ ೩೯೪೧ ಹುಡುಗಿಯರು ವ್ಯಾಸಂಗ ಮಾಡುತ್ತಿದ್ದಾರೆ. ಅದೇ ೨೦೦೯ರ ಮಾರ್ಚ್ ಅಂತ್ಯಕ್ಕೆ ತಾಲೂಕಿನಲ್ಲಿದ್ದ ಒಟ್ಟು ೫೬ ಪ್ರೌಢಶಾಲೆಗಳಲ್ಲಿ ೧೫,೯೦೧ (೮,೨೯೩ ಬಾಲಕರು ಹಾಗೂ ೭,೬೧೮ ಬಾಲಕಿಯರು) ವ್ಯಾಸಂಗ ಮಾಡುತ್ತಿದ್ದರು.

ಪದವಿಪೂರ್ವ ಶಿಕ್ಷಣ : ಪ್ರೌಢಶಾಲೆ ಹಾಗೂ ಪದವಿ ಹಂತಗಳ ನಡುವಣ ಎರಡು ವರ್ಷಗಳ ಪದವಿಪೂರ್ವ ಶಿಕ್ಷಣ, ವ್ಯಾಸಂಗಾರ್ಥಿಯ ಭವಿಷ್ಯವನ್ನು ನಿರ್ಧರಿಸುವ, ರೂಪಿಸುವ ಮಹತ್ವದ ಹಂತವಾಗಿದೆ. ೨೦೦೬ರ ಮಾರ್ಚ್ ಅಂತ್ಯಕ್ಕೆ ತಾಲೂಕಿನಲ್ಲಿ ೧೨ ಪದವಿಪೂರ್ವ ಕಾಲೇಜುಗಳಿದ್ದವು. ಆದರೆ ೨೦೦೯ರ ಮಾರ್ಚ್ ಅಂತ್ಯಕ್ಕೆ ಇವುಗಳ ಸಂಖ್ಯೆ ೧೫ಕ್ಕೆ ಏರಿ ಒಟ್ಟು ೪,೭೪೦ (೨,೫೭೮ ಬಾಲಕರು ಮತ್ತು ೨,೧೬೨ ಬಾಲಕಿಯರು) ಮಂದಿ ವ್ಯಾಸಂಗಾರ್ಥಿಗಳಿದ್ದರು. ತಾಲೂಕಿನಲ್ಲಿರುವ ಎರಡು

ಪಾಲಿಟೆಕ್ನಿಕ್ ಕಾಲೇಜುಗಳಲ್ಲಿ ಒಟ್ಟು ೮೭೦ (೭೪೭ ಬಾಲಕರು ಹಾಗೂ ೧೨೩ ಬಾಲಕಿಯರು) ವ್ಯಾಸಂಗ ನಿರತರಾಗಿದ್ದರು.

ಪದವಿ ಶಿಕ್ಷಣ : ಪದವಿಪೂರ್ವ ಶಿಕ್ಷಣದ ನಂತರ ಕಲೆ, ವಿಜ್ಞಾನ, ಅಕೌಂಟ್ಸ್, ಪದವಿ ಪಡೆಯಲು ಅವಕಾಶ ಕಲ್ಪಿಸುವುದೇ ಸಾಮಾನ್ಯ ಪದವಿ ಶಿಕ್ಷಣವಾಗಿದೆ. ೨೦೦೯ರ ಮಾರ್ಚ್ ಅಂತ್ಯಕ್ಕೆ ತಾಲೂಕಿನಲ್ಲಿದ್ದ ಎರಡು ಪದವಿ ಕಾಲೇಜುಗಳಲ್ಲಿ ಒಟ್ಟು ೫೪೯ (೨೬೧ ಬಾಲಕರು ಹಾಗೂ ೨೪೮ ಬಾಲಕಿಯರು) ಪದವಿ ಶಿಕ್ಷಣ ಪಡೆಯುತ್ತಿದ್ದರು. ನಂಜನಗೂಡಿನಲ್ಲಿ ಒಂದು ಸರ್ಕಾರಿ ಐಟಿಐ ಕಾಲೇಜು, ಜೆ.ಎಸ್.ಎಸ್. ಪಾಲಿಟೆಕ್ನಿಕ್ ಕಾಲೇಜು ಹಾಗೂ ದೇವನೂರಿನಲ್ಲಿ ಶ್ರೀ ಗುರುಮಲ್ಲೇಶ್ವರ ಪಾಲಿಟೆಕ್ನಿಕ್ ಕಾಲೇಜುಗಳು ತಾಂತ್ರಿಕ ಶಿಕ್ಷಣದ ಮೊದಲ ಮೆಟ್ಟಿಲುಗಳಾಗಿ ಗ್ರಾಮಾಂತರ ವಿದ್ಯಾರ್ಥಿಗಳಿಗೆ ಅನುಕೂಲಕರವಾಗಿವೆ. ಸುತ್ತೂರಿನಲ್ಲಿ ಜೆ.ಎಸ್.ಎಸ್. ಸಂಸ್ಥೆಯಿಂದಲೇ ನಡೆಯುತ್ತಿರುವ ಡಿ.ಎಡ್., ಬಿ.ಎಡ್.ಕಾಲೇಜುಗಳು, ಸಿ.ಪಿ.ಎಡ್, ಬಿ.ಪಿ.ಎಡ್ ಕಾಲೇಜುಗಳು ಶಿಕ್ಷಕರ ತರಬೇತಿ ನೀಡುತ್ತಿವೆ. ಇಷ್ಟಲ್ಲದೆ ಸುತ್ತೂರು ಮತ್ತು ಹುಲ್ಲಹಳ್ಳಿಗಳಲ್ಲಿ ಸಂಸ್ಕೃತ ಪಾಠಶಾಲೆ ಹಾಗೂ ಸುತ್ತೂರಿನಲ್ಲಿ ವೇದ, ಆಗಮ ಮತ್ತು ಜ್ಯೋತಿಷ್ಯ ಪಾಠಶಾಲೆಗಳೂ ಇವೆ.

ಖಾಸಗಿ ಶಿಕ್ಷಣ ಸಂಸ್ಥೆಗಳು : ವಿದ್ಯಾದಾನದ ವಿಷಯದಲ್ಲಿ ಖಾಸಗಿ ಶಿಕ್ಷಣ ಸಂಸ್ಥೆಗಳು ವಹಿಸುವ ಪಾತ್ರ ಅಪಾರವಾದುದು. ನಂಜನಗೂಡು ತಾಲೂಕಿನ ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ಅಗ್ರಸ್ಥಾನ ಜಗದ್ಗುರು ಶ್ರೀ ಶಿವರಾತ್ರೀಶ್ವರ ಸಂಸ್ಥೆಗೆ ಸಲ್ಲುತ್ತದೆ. ಜೆ.ಎಸ್.ಎಸ್.ವಿದ್ಯಾಸಂಸ್ಥೆಗಳ ವಿವರ ಈ ರೀತಿ ಇದೆ:

ಸಾಂಪ್ರದಾಯಿಕ ಶಿಕ್ಷಣ : ಶಾಲಾ ಶಿಕ್ಷಣ : ಶಿಶುಧಾಮಗಳು–೦೭; ಶಿಶುವಿಹಾರಗಳು–೧೮; ಸಹನಾ–೦೨; ಪ್ರಾಥಮಿಕ ಶಾಲೆಗಳು–೧೯; ಪ್ರೌಢಶಾಲೆಗಳು–೫೫; ಜೆ.ಎಸ್.ಎಸ್.ಪಬ್ಲಿಕ್ ಶಾಲೆಗಳು–೦೮; ಸಂಸ್ಕೃತ ಪಾಠಶಾಲೆಗಳು–೦೨; ಗುರುಕುಲ–೦೨; ಹಿಂದಿ ವಿದ್ಯಾಲಯ–೦೧.

ಕಾಲೇಜು ಶಿಕ್ಷಣ : ತಾಲೂಕಿನಲ್ಲಿ ಪದವಿಪೂರ್ವ ಕಾಲೇಜುಗಳು –೧೭; ಪದವಿ ಕಾಲೇಜು–೦೭; ತಾಂತ್ರಿಕ ಶಿಕ್ಷಣ ಕಾಲೇಜುಗಳು–೦೩; ಪಾಲೆಟೆಕ್ನಿಕ್‌ಗಳು–೦೫; ಕೈಗಾರಿಕಾ ತರಬೇತಿ ಕೇಂದ್ರಗಳು–೦೩; ಅಂತಾರಾಷ್ಟ್ರೀಯ ಸಂಸ್ಥೆಗಳು; ವೈದ್ಯಕೀಯ ಶಿಕ್ಷಣ–೦೩(ವೈದ್ಯಕೀಯ/ದಂತ/ಆಯುರ್ವೇದ); ಫಾರ್ಮಸಿ–೦೨ ಕಾರ್ಯನಿರ್ವಹಿಸುತ್ತಿವೆ.

ದೇವನೂರಿನ ಗುರುಮಲ್ಲೇಶ್ವರ ಮಹಾ ಸಂಸ್ಥಾನವು ಒಟ್ಟು ೧೬ ಶಿಕ್ಷಣ ಸಂಸ್ಥೆಗಳನ್ನು ನಡೆಸುತ್ತಿದೆ. ಹಗಿನವಾಳುವಿನ ಸಂಯುಕ್ತ ಪದವಿಪೂರ್ವ ಕಾಲೇಜು; ತಗಡೂರು, ದೇವನೂರು, ನಂಜನಗೂಡು, ಕಾರ್ಯ, ಎಸ್.ಹೊಸಕೋಟೆಗಳಲ್ಲಿರುವ ಪ್ರೌಢಶಾಲೆಗಳು ಉಲ್ಲೇಖನೀಯ. ತಗಡೂರಿನ ಮಹಾಯೋಗಿ ಟಿ.ಎಸ್.ಸುಬ್ಬಣ್ಣನವರ ಶ್ರಮದಫಲ ಸಾರ್ವಜನಿಕ ಶಿಕ್ಷಣಸಂಸ್ಥೆ; ನಂಜನಗೂಡಿನ ಎನ್.ರಾಚಯ್ಯನವರ ಕನಸಿನ ಸಾಕಾರ ರೂಪ 'ಕನಕದಾಸ ಶಿಕ್ಷಣ ಟ್ರಸ್ಟ್'; ಹೆಜ್ಜಿಗೆ ಲಿಂಗಣ್ಣನವರಿಂದ ಸ್ಥಾಪಿತವಾದ

ನಂಜುಂಡೇಶ್ವರ ವಿದ್ಯಾವರ್ಧಕ ಶಿಕ್ಷಣ ಟ್ರಸ್ಟ್‌ನ ಪದವಿ ಕಾಲೇಜು; ಲಯನ್ಸ್, ರೋಟರಿ, ಕಾರ್ಮಲ್ ಸಿಟಿಜನ್, ಶ್ರೀ ಗುರುವಿದ್ಯಾವಿಕಾಸ ಸಂಸ್ಥೆ ಹೀಗೆ ಹಲವಾರು ಖಾಸಗಿ ಸಂಸ್ಥೆಗಳು ಶಿಕ್ಷಣ ಕ್ಷೇತ್ರದಲ್ಲಿ ಶ್ರಮಿಸುತ್ತಿವೆ.

ವಯಸ್ಕರ ಶಿಕ್ಷಣ : ಅನಕ್ಷರತೆ ಒಂದು ಸಮುದಾಯಕ್ಕೆ ಆ ಮೂಲಕ ದೇಶಕ್ಕೆ ಮಾರಕ ಎಂಬುದು ನಿಸ್ಸಂಶಯ. ಅಕ್ಷರತಾ ಮಟ್ಟವು ಜೀವನದ ಗುಣಮಟ್ಟದ ಮೇಲೆ ಪ್ರಭಾವ ಬೀರುವುದೆಂಬುದರಲ್ಲಿ ಎರಡು ಮಾತಿಲ್ಲ. ಈ ಪಾಪವನ್ನು ಹೋಗಲಾಡಿಸಲು ಅನೇಕ ರೀತಿಯ ಪ್ರಯತ್ನಗಳು ಭಾರತದಲ್ಲೂ ಸಾಗುತ್ತಿದೆ. ದೇಶಕ್ಕೆ ಸ್ವಾತಂತ್ರ್ಯ ಬರುವುದಕ್ಕೆ ಮುನ್ನವೇ ಸಾಕ್ಷರತಾ ಕಾರ್ಯಕ್ರಮವನ್ನು ಪ್ರಾರಂಭಿಸಿದ್ದು ಕರ್ನಾಟಕದ ಹೆಗ್ಗಳಿಕೆ. ೧೯೧೨ರಲ್ಲೇ ಮೈಸೂರು ಪ್ರದೇಶದಲ್ಲಿ ರಾತ್ರಿ ಶಾಲೆಗಳು ಸರ್.ಎಂ.ವಿಶ್ವೇಶ್ವರಯ್ಯನವರ ದೂರದೃಷ್ಟಿಯ ಫಲವಾಗಿ ಪ್ರಾರಂಭವಾಗಿದ್ದುವು. ೧೯೪೧ರಲ್ಲಿ ಬಿ.ಎಂ.ಶ್ರೀ ಅಧ್ಯಕ್ಷತೆಯಲ್ಲಿ ಅಕ್ಷರ ಪ್ರಚಾರ ಸಾಕ್ಷರತಾ ಸಮಿತಿಯು ಅಸ್ತಿತ್ವಕ್ಕೆ ಬಂದು ವಯಸ್ಕರ ಶಿಕ್ಷಣ ಕಾರ್ಯಕ್ರಮಕ್ಕೆ ಭದ್ರ ಬುನಾದಿ ಹಾಕಿತು. ೧೯೭೮ರಲ್ಲಿ ರಾಷ್ಟ್ರೀಯ ವಯಸ್ಕರ ಶಿಕ್ಷಣ ಕಾರ್ಯಕ್ರಮದ ಜಾರಿಯಾಗಿ ಗ್ರಾಮೀಣ ಕ್ರಿಯಾತ್ಮಕ ಸಾಕ್ಷರತಾ ಯೋಜನೆ, ಅಕ್ಷರದೀಪ, ಸಾಮಾಜಿಕ ಕ್ರಿಯಾತ್ಮಕ ಸಾಕ್ಷರತೆ, ಅಕ್ಷರಸೇನಾ ಮುಂತಾದ ಕಾರ್ಯಕ್ರಮಗಳನ್ನು ಪರಿಚಯಿಸಿತು. ೧೯೮೮ರಲ್ಲಿ ರಾಷ್ಟ್ರೀಯ ಸಾಕ್ಷರತಾ ಮಿಷಿನ್ ಪ್ರಾಧಿಕಾರದ ಸ್ಥಾಪನೆಯಿಂದ ಸಂಪೂರ್ಣ ಸಾಕ್ಷರತಾ ಆಂದೋಲನಕ್ಕೆ ವಿಶೇಷ ಚಾಲನೆ ದೊರೆಯಿತು.

ವಿದ್ಯಾಪೀಠ : ಭಾರತದಲ್ಲಿ ಹಿಂದಿನಿಂದ ಬಂದ ಗುರುಕುಲ ಪದ್ಧತಿ ಮತ್ತು ಡೇನಿಷ್ ಪ್ರೌಢಶಾಲೆಯ ಪ್ರಭಾವದಿಂದ ಗ್ರಾಮೀಣ ಯುವಕ ಮತ್ತು ಯುವತಿಯರಿಗೆ ಅಕ್ಷರಾಭ್ಯಾಸದ ಜೊತೆಗೆ ವ್ಯವಸಾಯ, ಗ್ರಾಮೀಣ ಕಲೆಗಳಲ್ಲಿ ತರಬೇತಿ ನೀಡಿ ತಿಳಿಸಿಕೊಡಬೇಕೆಂಬ ಉದ್ದೇಶದಿಂದ 'ವಿದ್ಯಾಪೀಠ' ಯೋಜನೆಯನ್ನು ಹಮ್ಮಿಕೊಳ್ಳಲಾಯಿತು. ಈ ಯೋಜನೆಯ ಮೊದಲ ಫಲ ನಂಜನಗೂಡಿನಲ್ಲಿ ೧೯೪೭ರಲ್ಲಿ ಪ್ರಾರಂಭವಾದ ವಿದ್ಯಾಪೀಠ. ಈ ವಿದ್ಯಾಪೀಠದ ಸ್ಥಾಪನೆಯಲ್ಲಿ ವಿಶ್ವೇಶ್ವರಗೌಡ, ಹೆಜ್ಜಿಗೆ ಲಿಂಗಣ್ಣ ಮುಂತಾದವರು ಮಹತ್ವದ ಪಾತ್ರ ವಹಿಸಿದ್ದಾರೆ.

ಸಾರ್ವಜನಿಕ ಗ್ರಂಥಾಲಯ : ಸಾರ್ವಜನಿಕರಲ್ಲಿ ಓದಿನ ಬಗೆಗೆ ಸದಭಿರುಚಿ ಬೆಳೆಸಲು ಸಾರ್ವಜನಿಕ ಗ್ರಂಥಾಲಯ ವ್ಯವಸ್ಥೆಯನ್ನು ಹಮ್ಮಿಕೊಳ್ಳುವುದು ನೇತಾರರ ಕನಸುಗಳಲ್ಲಿ ಒಂದು. ನೆಹರೂ 'ನಮ್ಮ ದೇಶದಲ್ಲಿ ಪ್ರತಿಯೊಂದು ಹಳ್ಳಿಯಲ್ಲಿಯೂ ಕನಿಷ್ಟ ಒಂದು ಗ್ರಂಥಾಲಯವಿರುವಂತೆ ಮಾಡುವುದೇ ನಮ್ಮ ಪ್ರಯತ್ನವಾಗಬೇಕು. ಕೈಬೆರಳ ಮೇಲೆಣಿಸುವಷ್ಟೇ ವಿದ್ವಾಂಸರು ಅಥವಾ ಪಂಡಿತರಿಗೆ ಮಾತ್ರವೇ ಗ್ರಂಥಾಲಯ ಸೇವೆ ಪರಿಮಿತವಾಗದೇ ಸಾರ್ವಜನಿಕರನ್ನು ತಲುಪಬೇಕು' ಎಂದು ೧೯೫೫ರಲ್ಲಿ ಹೇಳಿದ ನುಡಿಗಳು ಇನ್ನೂ ಸಾಕಾರವಾಗಬೇಕಾಗಿದೆ.

ಗ್ರಾಮೀಣಾಭಿವೃದ್ಧಿಯಲ್ಲಿ ಮಹತ್ವದ ಪಾತ್ರ ವಹಿಸುವ, ಗ್ರಾಮ ಪಂಚಾಯತಿ ಗ್ರಂಥಾಲಯಗಳನ್ನು ಆರಂಭಿಸಿದ್ದು ಕರ್ನಾಟಕ ರಾಜ್ಯ ಎಂಬುದು ಗಮನಾರ್ಹ. ಕೃಷಿ ಮತ್ತು ನೀರಾವರಿ, ಹೈನುಗಾರಿಕೆ ಮತ್ತು ರೇಷ್ಮೆ, ಸಣ್ಣ ಕೈಗಾರಿಕೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ, ಶಿಕ್ಷಣ ಮತ್ತು ಸಾಕ್ಷರತೆ, ಸಹಕಾರ ಮಾರುಕಟ್ಟೆ ಸಾಲ ಸೌಲಭ್ಯಗಳು, ಉದ್ಯೋಗ ಮಾಹಿತಿ ಮುಂತಾದ ವಿವರಗಳು ಈ ಗ್ರಂಥಾಲಯಗಳಲ್ಲಿ ದೊರೆಯುವಂತಾದಾಗ ಯೋಜನೆ ಸಾರ್ಥಕತೆ ಪಡೆಯುತ್ತದೆ. ೨೦೦೬ರ ಮಾರ್ಚ್ ಅಂತ್ಯಕ್ಕೆ ನಂಜನಗೂಡಿನಲ್ಲಿ ಒಂದು ಸಾರ್ವಜನಿಕ ಗ್ರಂಥಾಲಯವಿತ್ತು. ಉಳಿದಂತೆ ನಂಜನಗೂಡು ತಾಲೂಕಿನಲ್ಲಿರುವ ಗ್ರಾಮ ಪಂಚಾಯಿತಿ ಗ್ರಂಥಾಲಯಗಳ ವಿವರ ಈ ರೀತಿ ಇದೆ: ನಂಜನಗೂಡು ತಾಲೂಕಿನಲ್ಲಿ ಇರುವ ಗ್ರಾಮ ಪಂಚಾಯಿತಿ ಗ್ರಂಥಾಲಯಗಳು (ಯೋಜನೆ): ೧. ಕಳಲೆ; ೨. ಹುಲ್ಲಹಳ್ಳಿ; ೩. ಅಳಗಂಜಿ; ೪. ಹೆಡಿಯಾಲ; ೫. ಹುರ; ೬. ಹರದನಹಳ್ಳಿ; ೭. ತಾಂಡವಪುರ; ೮. ಮರಳೂರು; ೯. ದೊಡ್ಡಕವಲಂದೆ; ೧೦. ಹದಿನಾರು; ೧೧. ಹಗಿನವಾಳು; ೧೨. ಹಾಡ್ಯ; ೧೩. ಕೋಣನೂರು; ೧೪. ಕೆಂಪಿಸಿದ್ಧನಹುಂಡಿ.

ಯೋಜನೇತರ ವಿಭಾಗದಲ್ಲಿ ಗ್ರಾಮ ಪಂಚಾಯ್ತಿ ಗ್ರಂಥಾಲಯಗಳು ಹೆಮ್ಮರಗಾಲ, ತಗಡೂರು, ಬದನವಾಳು, ನಗರ್ಲೆಗಳಲ್ಲಿ ಕಾರ್ಯನಿರ್ವಹಿಸುತ್ತಿವೆ. ಹೊಸಕೋಟೆ, ಸುತ್ತೂರು, ಬಿಳಿಗೆರೆ, ತಾಯೂರು, ದೇವನೂರು, ಕಾರ್ಯ, ದಾಸನೂರು, ಹೊರಳವಾಡಿ, ದೇವರಸನಹಳ್ಳಿ, ಕೂಡ್ಲಾಪುರ, ಹಲ್ಲರೆ, ನವಿಲೂರು, ಕಸುವಿನಹಳ್ಳಿ, ಬೇಗೂರು, ನೆಲ್ಲಿತಾಳಪುರ, ಎಡತಲೆ, ರಾಂಪುರ, ಹುಳಿಮಾವು, ತುಂನೇರಳೆ, ಸಿಂಧುವಳ್ಳಿ, ದೇವೀರಮ್ಮನಹಳ್ಳಿ, ಕುರಿಹುಂಡಿ, ದುಗ್ಗಳ್ಳಿ, ದೇವರಾಯಶೆಟ್ಟಿಪುರ, ಶಿರಮಳ್ಳಿ, ನೇರಳೆ– ಈ ೨೭ ಕೇಂದ್ರಗಳಲ್ಲಿ ಗ್ರಾಮ ಪ್ರಂಚಾಯತಿ ಗ್ರಂಥಾಲಯಗಳನ್ನು ಪ್ರಾರಂಭಿಸುವ ಆಲೋಚನೆಯೂ ಇತ್ತು. ಅದರಂತೆ ೨೦೦೯ರ ಮಾರ್ಚ್ ಅಂತ್ಯಕ್ಕೆ ತಾಲೂಕಿನಲ್ಲಿ ಒಟ್ಟು ೪೭ ಗ್ರಂಥಾಲಯಗಳು ಕಾರ್ಯನಿರ್ವಹಿಸುತ್ತಿದ್ದು, ಎಲ್ಲಾ ಪಂಚಾಯಿತಿ ಗ್ರಂಥಾಲಯಗಳು ಆರಂಭಗೊಂಡಿವೆ.

ಕ್ರೀಡೆ

ಗ್ರಾಮೀಣ ಕ್ರೀಡೆಗಳು : ಅನುಕರಣೆಯಿಂದ, ಪೀಳಿಗೆಯಿಂದ ಪೀಳಿಗೆಗೆ ಉಳಿದುಕೊಂಡು ಬಂದ, ಸಾಮಾಜಿಕ ಅಗತ್ಯಗಳ ಪೂರೈಕೆಗಾಗಿ ಹೊಸದಾಗಿ ಕಲಿತುಕೊಂಡ ಗ್ರಾಮೀಣ ಪರಿಕರಗಳಿಂದಲೇ ರೂಪುಗೊಂಡ ಗ್ರಾಮೀಣ ಕ್ರೀಡೆಗಳು ಇಂದಿಗೂ ಪ್ರಸ್ತುತವಾಗುತ್ತವೆ. ಓಡುವುದು, ನೆಗೆಯುವುದು, ಹಗ್ಗದಾಟ, ಗುರಿಯಿಡುವುದು, ಸಮತೋಲನ ಕಾಯ್ದುಕೊಳ್ಳುವುದು– ಇಂಥ ಮೂಲ ಚಟುವಟಿಕೆಗಳ ಅಡಿಪಾಯದ ಮೇಲೆ ರೂಪುಗೊಂಡಿರುವ ಈ ರೀತಿಯ ಆಟಗಳಿಗೆ ಹೆಚ್ಚಿನ ಉಪಕರಣಗಳ ಅಗತ್ಯವಿರುವುದಿಲ್ಲ. ಯಾವುದೇ ವಯೋಮಾನದವರೂ ಸುಲಭವಾಗಿ, ಸರಳವಾಗಿ ಈ ಆಟಗಳ ಮೋಡಿಗೆ ಸಿಲುಕಿಕೊಳ್ಳಬಹುದು.

ಗ್ರಾಮೀಣ ಕ್ರೀಡೆಗಳಲ್ಲಿ ಗಮನಾರ್ಹವಾದ ಮತ್ತೊಂದು ಸಂಗತಿಯೆಂದರೆ ಆಟಗಾರರಲ್ಲೇ ಪರಸ್ಪರ ಬೆಳೆಯುವ ವಿಶ್ವಾಸ ಗೌರವಗಳು. ಹೀಗಾಗಿ ಚಾತುರ್ಯ, ಬುದ್ಧಿ, ಸಾಂಘಿಕತೆ, ಶಿಸ್ತು, ನೀತಿ, ನಿಯಮಾವಳಿಗಳ ಪ್ರಚೋದನೆಗೆ ಈ ರೀತಿಯ ಕ್ರೀಡೆಗಳು ಭದ್ರವಾದ ಅಡಿಪಾಯವನ್ನು ಒದಗಿಸುತ್ತವೆ. ಮಾನಸಿಕ ಬೆಳವಣಿಗೆಗೆ, ಆಂತರಿಕ ವಿಕಾಸಕ್ಕೆ ನೆರವು ನೀಡುವಂತೆ ಶಾರೀರಿಕ ದೃಢಕಾಯತ್ವಕ್ಕೂ ಈ ಆಟಗಳಿಂದ ವಿಶೇಷ ನೆರವು ಲಭಿಸುತ್ತದೆ. ಇಂದು ರಾಷ್ಟ್ರೀಯ ಕ್ರೀಡೆಯ ಮಹತ್ವ ಗಳಿಸಿಕೊಂಡು ಏಷ್ಯಾಡ್ಸ್ ಹಾಗೂ ಒಲಿಂಪಿಕ್ಸ್‌ಗಳಲ್ಲೂ ಸ್ಥಾನ ಪಡೆದುಕೊಂಡಿರುವ ಕಬಡ್ಡಿ ಆಟ ಇದಕ್ಕೆ ಅತ್ಯುತ್ತಮ ಉದಾಹರಣೆಯಾಗಿ ನಿಲ್ಲುತ್ತದೆ. ಒಟ್ಟಾರೆಯಾಗಿ ಗ್ರಾಮೀಣ ಕ್ರೀಡೆಗಳನ್ನು ಗಂಡಸರ ಆಟಗಳು, ಹೆಂಗಸರ ಆಟಗಳು, ಮಕ್ಕಳ ಆಟಗಳು ಎಂದು ವಿಭಾಗಿಸುವುದನ್ನೂ ಮತ್ತೆ ಇವುಗಳನ್ನು ಒಳಾಂಗಣ, ಹೊರಾಂಗಣ ಎಂದು ಪ್ರತ್ಯೇಕಿಸುವುದನ್ನೂ ಕಾಣಬಹುದು. ಮಗುವಿನ ಬೆಳವಣಿಗೆಯ ಹಂತದಿಂದಲೂ ಕಾಣಬರುವ ಆಟಗಳನ್ನು ಗುರುತಿಸುವ ಪ್ರಯತ್ನ ಇಲ್ಲಿದೆ.

ಅಚ್ಚಚ್ಚು ಬೆಲದಚ್ಚು, ಕೈ–ಕೈ ಎಲ್ಲೋದೋ, ಮೆಲ್ಲ ಬಂದು ಗಿಲ್ಲಿ ಪೋಪೋ ಮುಂತಾದ ಆಟಗಳಿಂದ ಪ್ರಾರಂಭವಾಗುವ ಇವರ ಓಡುವ ಆಟ ಮುಂದೆ ಕಣ್ಣುಮುಚ್ಚಾಲೆ, ಜೂಟಾಟ, ಷರಾಪ್–ಕರೆಂಟ್, ಚೈನ್ ಕಟ್ಟೋ ಆಟ, ನಾಯಿಮೂಲೆ ಆಟ, ಚಿನ್ನ ತರುವ ಆಟ, ಐಸ್ ಪೈಸ್, ಕಲ್ಲು–ಮಣ್ಣು, ಕೋಲು–ಕಲ್ಲು, ಕೊಕ್ಕೋ, ರಾಮನ ಚಂಡು ಭೀಮನ ಚಂಡು, ಈ ರೀತಿಯ ಆಟಗಳಲ್ಲಿ ಬೆಳೆಯುತ್ತಾ ಹೋಗುತ್ತದೆ. ಮುಂದೆ ಹೆಣ್ಣುಮಕ್ಕಳು ಕುಂಟೋಬಿಲ್ಲೆ, ಷರಾಫ್ ಆಟ, ಬಳೆಚೂರಿನ ಆಟ, ಮರಳುಕಡ್ಡಿ ಆಟ, ಹುಣಸೆ ಬೀಜದ ಆಟ, ಆಣೆಕಲ್ಲು, ಕಳ್ಳ–ಪೊಲೀಸ್, ಚುಕ್ಕಿ ಆಟ ಮುಂತಾದ ಹೆಚ್ಚು ದೈಹಿಕ ಶ್ರಮವಿಲ್ಲದ ಆಟಗಳಿಗೆ ತಮ್ಮನ್ನು ಸೀಮಿತಗೊಳಿಸಿಕೊಂಡರೆ ಗಂಡುಮಕ್ಕಳು ಟಿಕ್ಕೆ ಆಟ, ಗೋಲಿ, ಗಜ್ಜುಗ, ಲಗೋರಿ, ಬುಗುರಿ, ಚಿನ್ನಿದಾಂಡು, ಮರಕೋತಿ, ಕಬಡ್ಡಿ, ಕುಸ್ತಿ, ಪಟ ಹಾರಿಸುವುದು, ಗುಂಡು ಎಸೆತ, ಎತ್ತು ಓಡಿಸುವುದು, ಗಾಡಿ ಓಡಿಸುವುದು ಮುಂತಾದ ವೈವಿಧ್ಯಮಯ ಆಟಗಳಿಗೆ ತಮ್ಮನ್ನು ತೆರೆದುಕೊಳ್ಳುತ್ತಾರೆ. ಪಗಡೆ, ಕಟ್ಟೆಮನೆ, ಚೌಕಾಬಾರ, ಅಳುಗುಳಿ ಮನೆ, ಚನ್ನೆಮನೆ, ಮುಂತಾದ ಒಳಾಂಗಣ ಆಟಗಳು ಆಸಕ್ತಿ ಇರುವ ಎಲ್ಲಾ ವಯೋಮಾನದವರನ್ನು ಆಕರ್ಷಿಸುತ್ತವೆ.

ಈ ರೀತಿಯ ಪರಂಪರಾನುಗತ ಆಟಗಳೊಂದಿಗೆ ವ್ಯವಸ್ಥಿತವಾದ ಆಟಗಳೂ ತಾಲೂಕಿನಲ್ಲಿ ಕಂಡುಬರುತ್ತವೆ. ತಾಲೂಕಿನಲ್ಲಿ ಕ್ರೀಡಾ ಚಟುವಟಿಕೆಗಳನ್ನು ಪ್ರೋತ್ಸಾಹಿಸಬೇಕೆನ್ನುವ ಪ್ರೇರಣೆಯಿಂದ ೧೯೦೪ರಲ್ಲಿ 'ಟೌನರ್ಸ್ ಅಸೋಸಿಯೇಷನ್' ಎಂಬ ಕ್ರೀಡಾ ಸಂಸ್ಥೆಯನ್ನು ಹದಿನೈದು ಜನ ಕ್ರೀಡಾಸಕ್ತರು ಸೇರಿ ಪ್ರಾರಂಭಿಸಿದರು. ಪ್ರಸ್ತುತ ಇದು 'ಟೌನ್ ಟೆನ್ನಿಸ್ ಕ್ಲಬ್' ಎಂಬ ಹೆಸರಿನಿಂದ ಬೆಳೆದಿದೆ. ಎರಡು ಟೆನ್ನಿಸ್ ಕೋರ್ಟ್‌ಗಳಿವೆ. ಶಟಲ್ ಬ್ಯಾಡ್ಮಿಂಟನ್, ಟೇಬಲ್ ಟೆನ್ನಿಸ್ ಹಾಗೂ ಟೆನ್ನಿಸ್ ಆಟಗಳಿಗೆ ಪ್ರೋತ್ಸಾಹ ನೀಡಲಾಗುತ್ತಿದೆ. ಬಿ.ವಿ.ಪಂಡಿತ್, ಸಿ.ಕೆ.ನಾಗಪ್ಪ, ಟಿ.ಎಸ್.ಗುಂಡಪ್ಪ,

ಎಸ್.ನಾರಾಯಣ, ಶಂಕರನಾರಾಯಣ, ಸಿ.ಕೆ.ಎನ್.ರಾಜಾ ಇವರೆಲ್ಲಾ ಉತ್ತಮ ಟೆನ್ನಿಸ್ ಆಟಗಾರರೆಂಬ ಖ್ಯಾತಿ ಹೊಂದಿದ್ದವರು.

ನಂಜನಗೂಡಿನ ಸಿ.ಕೆ.ನಾಗಪ್ಪ, ಡಾ:ಪಿ.ಸಿ,ದೊರೆಸ್ವಾಮಿ, ಅಬ್ದುಲ್ ರಜಾಕ್ ಫುಟ್‌ಬಾಲ್‌ನಲ್ಲಿ ಅತ್ಯಂತ ಯಶಸ್ಸು ಕಂಡ ಆಟಗಾರರು. ೧೯೪೦ರಲ್ಲಿ ಕೆ.ನರಸೇಗೌಡ ಹಾಗೂ ಸಾಹುಕಾರ್ ಮಾದಯ್ಯನವರ ನೇತೃತ್ವದಲ್ಲಿ ಸ್ಪೋರ್ಟ್ಸ್ ಯೂನಿಯನ್ ಟೀಮ್ ಪ್ರಾರಂಭವಾಯಿತು. ಕಾಳಪ್ಪ, ನಾರಾಯಣ, ಎನ್.ಕೆ.ನಾಗರಾಜು, ಮಹಾಲಿಂಗು, ವೆಂಕಟೇಶ್, ಯು.ಎನ್.ಪದ್ಮರಾವ್, ಪಿ.ಡಿ.ಮನೋಹರ್ ಇವರೆಲ್ಲಾ ರಾಷ್ಟ್ರಮಟ್ಟದಲ್ಲಿ ಹೆಸರು ಮಾಡಿದ ಫುಟ್‌ಬಾಲ್ ಆಟಗಾರರು. ಶಂಕರನಾರಾಯಣ ಅಯ್ಯರ್ ಬ್ಯಾಡ್ಮಿಂಟನ್ ಹಾಗೂ ಟೆನ್ನಿಸ್ ಎರಡರಲ್ಲೂ ಹೆಸರು ಗಳಿಸಿದ್ದರು. ವೆಂಕಟಸುಬ್ಬನ್ ಮತ್ತು ಸಿ.ಕೆ.ನಾಗಪ್ಪ, ಎನ್.ಪ್ರಕಾಶ್, ಮಹೇಶ್ ಇವರು ಕೂಡ ಬ್ಯಾಡ್ಮಿಂಟನ್‌ನಲ್ಲಿ ಹೆಸರಾದ ಆಟಗಾರರು. ವಾಲಿಬಾಲ್‌ನಲ್ಲಿ ಶಂಕರನಾರಾಯಣ ಹಾಗೂ ಬ್ಯಾಸ್ಕೆಟ್‌ಬಾಲ್‌ನಲ್ಲಿ ರಂಗಸ್ವಾಮಿ ಇವರು ಅಂತರರಾಷ್ಟ್ರೀಯ ಪಂದ್ಯಗಳನ್ನು ಆಡಿದ್ದಾರೆ. ರವಿ, ಬಿ.ಸುರೇಶ್, ಕೆ.ಜಯರಾಂ, ದಿನೇಶ್ ಇವರು ಬ್ಯಾಸ್ಕೆಟ್‌ಬಾಲ್ ಆಟದಲ್ಲಿ ಪರಿಣತರು.

೧೯೭೦ರಲ್ಲಿ ನಂಜನಗೂಡು ಸ್ಪೋರ್ಟ್ಸ್ ಯೂನಿಯನ್, ಖೋಖೋ ಕ್ಲಬ್‌ಗಳು ಆರಂಭವಾದವು. ಜಾವಿದ್ ಅಹಮದ್ ಕಾರ್ಯದರ್ಶಿಯಾಗಿ ಈ ಸಂಸ್ಥೆಗಳಿಗೆ ಸಾಕಷ್ಟು ದುಡಿದಿದ್ದಾರೆ. ಎನ್.ಮಹದೇವ್, ಶ್ರೀಕಣ್ಣನ್, ಸಿದ್ಧರಾಜು, ಶಶಿಧರ್ ಜಿ.ವೀಣಾ, ಕಲ್ಪನಾ ಮುಂತಾದ ಕ್ರೀಡಾ ಪ್ರತಿಭೆಗಳನ್ನು ಇಲ್ಲಿ ಸ್ಮರಿಸಬಹುದು. ಯೋಗ, ದೇಹದಾರ್ಢ್ಯ ಬೆಳವಣಿಗೆ ಮುಂತಾದ ಸಂಸ್ಥೆಗಳು ನಂಜನಗೂಡಿನಲ್ಲಿ ಕಾರ್ಯನಿರ್ವಹಿಸುತ್ತಿವೆ.

* * * *